ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ಯೋಜನೆಯನ್ನು ಪುನರ್ ಆರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಇಲ್ಲ.

ಶಿಕಾರಿಪುರ ನಗರದ ಕಾಲೇಜು ಕಟ್ಟಡದ ನಿರ್ಮಾಣದ ಬಗ್ಗೆ

೧೪೬೨ (೩೦೪೫) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಿಕಾರಿಪುರ ನಗರದಲ್ಲಿ ಕಟ್ಟುತ್ತಿರುವ ಪ್ರಥಮದರ್ಜೆ ಕಾಲೇಜು ಕಟ್ಟಡ ಈಗ ಯಾವ ಹಂತದಲ್ಲಿದೆ. ?

ಆ) ಅವಧಿಯೊಳಗೆ ಈ ಕಟ್ಟಡದ ಕೆಲಸ ಮುಗಿಸಲಾಗುವುದೆ ?

ಇ) ೧೯೮೭–೮೮ನೇ ಸಾಲಿನಲ್ಲಿ ಈ ಕಟ್ಟಡಕ್ಕೆ ಖರ್ಚು ಮಾಡಲಾದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡ ಮತ್ತು ನೀರಾವರಿ ಸಚಿವರು).—

ಅ) ಇದುವರೆಗೆ ಕಾಲೇಜು ಕಟ್ಟಡ ಬೇಸ್‌ಮೆಂಟ್‌ವರೆಗೆ ಬಂದಿರುತ್ತದೆ.

ಆ) ಗುತ್ತಿಗೆ ಕರಾರಿನಂತೆ ದಿನಾಂಕ :೨೭–೧೨–೮೯ಕ್ಕೆ ಕಟ್ಟಡವನ್ನು ಮುಗಿಸಬೇಕಾಗಿದೆ.

ಇ) ೧೯೮೭–೮೮ ರ ಸಾಲಿನಲ್ಲಿ ೦.೯೯ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಬಿ. ಎಡ್. ಕಾಲೇಜು ಮಂಜೂರು ಬಗ್ಗೆ

೧೪೬೩ (೩೦೭೩) ಶ್ರೀ ಬಿ. ಜಿ. ಜವಳಿಂಡಿ (ಮುಧೋಳ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ೧೯೮೮-೮೯ರಲ್ಲಿ ಬಿ. ಎಡ್. ಕಾಲೇಜುಗಳನ್ನು ತೆರೆಯಲು ಸರ್ಕಾರದವರು ಮಂಜೂರು ನೀಡಿರುವ ಸಂಖ್ಯೆ ಎಷ್ಟು ?

ಆ) ಅವು ಯಾವ ಯಾವ ಜಿಲ್ಲೆಗಳಿಗೆ ಕೊಡಲಾಗಿದೆ?

ಇ) ಈ ಕಾಲೇಜುಗಳನ್ನು ನಿಯಮಾವಳಿಗೆ ಅನುಗುಣವಾಗಿ ಮಂಜೂರಾತಿ ನೀಡಲಾಗಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—

ಅ) ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹೊಸ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದ ಬಗ್ಗೆ

೧೪೬೪ (೨೯೧೩) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರವು ೧೯೮೮–೮೯ನೇ ಸಾಲಿಗೆ ಮಂಜೂರು ಮಾಡಿರುವ ಹಣವೆಷ್ಟು ?

ಆ) ಕೇಂದ್ರದ ಈ ನೆರವಿನೊಡನೆ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ?